# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ :-** 2020-21ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಅಂಕಗಳನ್ನು ನಿಗದಿಪಡಿಸಿ ಫಲಿತಾಂಶವನ್ನು ಘೋಷಿಸುವ ಕುರಿತು.

**ಓದಲಾಗಿದೆ:-**
1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:03.06.2021ರಂದು ನಡೆದ ಸಭಾ ನಡವಳಿ.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಕಛೇರಿ ಪ್ರಕಟಣೆ ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿಪಪ್ರ/2020-21 ದಿನಾಂಕ: 03.06.2021.
3. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪತ್ರ ಸಂಖ್ಯೆ: ಪ್ರಾ.ಪ್ರೌ.ಸ.ಸ/206/2020-21 ದಿನಾಂಕ:04-06-2021.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಜ್ಞಾಪನ ಸಂಖ್ಯೆ: ಪಪೂಶಿಇ/ಪರೀಕ್ಷೆ/ದ್ವಿಫಸ/2021-22 ದಿನಾಂಕ:10-06-2021.
5. ತಜ್ಞರ ಸಮಿತಿಯ ವರದಿ ದಿನಾಂಕ:22.06.2021.
6. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಕಛೇರಿ ಏಕಕಡತ ಪಪೂಶಿಇ/ಪರೀಕ್ಷೆ/ದ್ವಿಫಪ್ರ/01/2021-22 ದಿ:01.07.2021.

* * * * *

**ಪ್ರಸ್ತಾವನೆ:**

ಮೇಲೆ(1)ರಲ್ಲಿ ಓದಲಾದ ಸಭಾ ನಡವಳಿಯಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:03.06.2021ರಂದು ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ, ಕೋವಿಡ್-19ರ ಸಾಂಕ್ರಾಮಿಕ ರೋಗದ ತೀವ್ರತೆ ಹೆಚ್ಚಾಗುತ್ತಿದ್ದ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಮತ್ತು ಅವರ ಪರಿಸರದಲ್ಲಿರುವ ಎಲ್ಲಾ ಜನರ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರವು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 22(1) ಮತ್ತು (2)ರ ನಿಯಮದಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 2021ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ರದ್ದುಗೊಳಿಸಲು ತೀರ್ಮಾನಿಸಲಾಯಿತು. ಅದರಂತೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಮೇಲೆ (2)ರಲ್ಲಿ ಓದಲಾದ ಪ್ರಕಟಣೆಯ ಮೂಲಕ 2020-21ನೇ ಸಾಲಿನಲ್ಲಿ ದಾಖಲಾಗಿರುವ ದ್ವಿತೀಯ ಪಿಯುಸಿ ಹೊಸ ವಿದ್ಯಾರ್ಥಿಗಳಿಗೆ(Fresher) ಅವರು ಈ ಹಿಂದೆ ಪ್ರಥಮ ಪಿಯುಸಿಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅಂಕಗಳನ್ನು ನೀಡಿ ದ್ವಿತೀಯ ಪಿಯುಸಿ ಫಲಿತಾಂಶವನ್ನು ಪ್ರಕಟಗೊಳಿಸಲು ತೀರ್ಮಾನಿಸಿ, 2020-21ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ರದ್ದುಗೊಳಿಸಿರುತ್ತಾರೆ.

ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಅವರುಗಳ ಪರೀಕ್ಷಾ ಫಲಿತಾಂಶವು ಇನ್ನಷ್ಟು ಸಮಗ್ರವಾಗಲು ಹಾಗೂ ಹೆಚ್ಚು ನ್ಯಾಯಯುತವಾಗಲು ಪ್ರಥಮ ಪಿಯುಸಿಯಲ್ಲಿ ಗಳಿಸಿದ ಫಲಿತಾಂಶದ ಜೊತೆಗೆ ಎಸ್.ಎಸ್.ಎಲ್.ಸಿ. ಫಲಿತಾಂಶವನ್ನು ಅವಲೋಕಿಸಿ, ಸೂಕ್ತ ಪರಿಹಾರ ಸೂತ್ರವನ್ನು ಪ್ರಸ್ತಾಪಿಸುವಂತೆ ಮೇಲೆ(3)ರಲ್ಲಿ ಓದಲಾದ ಪತ್ರದಲ್ಲಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸೂಚಿಸಿರುತ್ತಾರೆ.

ಮೇಲೆ(4)ರಲ್ಲಿ ಓದಲಾದ ಜ್ಞಾಪನದಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗಳು ರದ್ದಾದ ಹಿನ್ನೆಲೆಯಲ್ಲಿ, ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಫಲಿತಾಂಶವನ್ನು ನೀಡುವ ಸಂಬಂಧ ಪರಿಗಣಿಸಬಹುದಾದ ಮಾನದಂಡಗಳು ಮತ್ತು ಅನುಸರಿಸಬಹುದಾದ ವಿಧಾನಗಳ ಬಗ್ಗೆ ವರದಿ ನೀಡಲು 12 ಅಧಿಕಾರಿಗಳು/ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಅದರಂತೆ ಸದರಿ ಸಮಿತಿಯು ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ವರದಿಯನ್ನು ಸಲ್ಲಿಸಿರುತ್ತದೆ.

ತಜ್ಞರ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ 2020–21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ವಿದ್ಯಾರ್ಥಿಗಳ ಫಲಿತಾಂಶವನ್ನು ಘೋಷಿಸಲು ಮೇಲೆ (6)ರಲ್ಲಿ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

1) ಹೊಸ ವಿದ್ಯಾರ್ಥಿಗಳು(Freshers) ಪ್ರಥಮ ಪಿ.ಯು.ಸಿ ವಾರ್ಷಿಕ ಪರೀಕ್ಷೆಯಲ್ಲಿ ಮತ್ತು ಎಸ್.ಎಸ್.ಎಲ್.ಸಿಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಂಕಗಳನ್ನು ನಿಗದಿಪಡಿಸಿ ಫಲಿತಾಂಶವನ್ನು ಘೋಷಿಸುವುದು.
2) ಪುನರಾವರ್ತಿತ ವಿದ್ಯಾರ್ಥಿಗಳಿಗೆ ತಲಾ ಕನಿಷ್ಠ ಉತ್ತೀರ್ಣ ಅಂಕಗಳು ಮತ್ತು ವಿಷಯಗಳಿಗೆ ನಿಗಧಿಪಡಿಸಿದ ಗರಿಷ್ಠ ಅಂಕಗಳಿಗೆ ಶೇ 5 ರಷ್ಟು ಕೃಪಾಂಕಗಳನ್ನು ನೀಡುವುದು.
3) ಒಂದು ವೇಳೆ ಈ ಮೇಲ್ಕಂಡ ವಿಧಾನಗಳಿಂದ ನೀಡಿದ ಅಂಕಗಳು ತೃಪ್ತಿಕರವಾಗದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಇಲಾಖೆಯು ನಡೆಸುವ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹಾಜರಾಗಲು ಅವಕಾಶ ನೀಡುವುದು.
4) ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುವುದು.

**2020–21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಹೊಸ ವಿದ್ಯಾರ್ಥಿಗಳ ಫಲಿತಾಂಶ ಘೋಷಣೆಗೆ ಅನುಸರಿಸಬೇಕಾದ ಕ್ರಮಗಳು.**

2020–21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಹೊಸ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ, ಸದರಿ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಅಥವಾ ಇತರೆ ಬೋರ್ಡ್‌ಗಳ 10ನೇ ತರಗತಿಯಲ್ಲಿ ಪಡೆದ ವಿಷಯವಾರು ಅಂಕಗಳಲ್ಲಿ ಶೇ 45 ರಷ್ಟು ಅಂಕಗಳು, ಪ್ರಥಮ ಪಿ.ಯು.ಸಿ ಯಲ್ಲಿ ಪಡೆದಿರುವ ಅಂಕಗಳಲ್ಲಿ ಶೇ 45 ರಷ್ಟು ಅಂಕಗಳು, ದ್ವಿತೀಯ ಪಿ.ಯು.ಸಿ ಯಲ್ಲಿ ವಿದ್ಯಾರ್ಥಿಯ ಶೈಕ್ಷಣಿಕ ಚಟುವಟಿಕೆಗಳಿಗೆ ಶೇಕಡ 10 ರಷ್ಟು ಅಂಕಗಳು ಹಾಗೂ ಪ್ರಥಮ ಪಿ.ಯು.ಸಿ ಯಲ್ಲಿ ಪಡೆದ ಅಂಕಗಳಿಗೆ ಶೇಕಡ 5 ರಷ್ಟು ಕೃಪಾಂಕಗಳನ್ನು ವಿಷಯಾವಾರು ಪರಿಗಣಿಸಿ ಒಟ್ಟು ಅಂಕಗಳನ್ನು ಕ್ರೋಢೀಕರಿಸಿ ದ್ವಿತೀಯ ಪಿ.ಯು.ಸಿ ಫಲಿತಾಂಶವನ್ನು ಪ್ರಕಟಿಸುವುದು.

**ಹಂತ–1:** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮತ್ತು ಇತರೆ ಯಾವುದೇ ಮಂಡಳಿಗಳ 10ನೇ ತರಗತಿ ಅಂಕಪಟ್ಟಿಯಲ್ಲಿ ಪ್ರಥಮ ಭಾಷಾ ವಿಷಯಕ್ಕೆ ಗರಿಷ್ಠ ಅಂಕಗಳು 100ಕ್ಕಿಂತ ಹೆಚ್ಚು ನಿಗದಿಪಡಿಸಿದ್ದರೆ, ಸದರಿ ವಿದ್ಯಾರ್ಥಿ ಪಡೆದಿರುವ ಅಂಕಗಳನ್ನು 100 ಅಂಕಗಳಿಗೆ ಪರಿವರ್ತಿಸಿಕೊಳ್ಳುವುದು.

**ಹಂತ–2:** ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ/10ನೇ ತರಗತಿ ಅಂಕಪಟ್ಟಿಯಲ್ಲಿನ ಮೂರೂ ಭಾಷಾ ವಿಷಯಗಳಲ್ಲಿ ಪಡೆದ ಅಂಕಗಳ ಪೈಕಿ ಹೆಚ್ಚು ಅಂಕಗಳನ್ನು ಪಡೆದಿರುವ ಎರಡು ಭಾಷಾ ವಿಷಯಗಳ ಅಂಕಗಳನ್ನು ಪರಿಗಣಿಸುವುದು. ಹೆಚ್ಚು ಅಂಕಗಳನ್ನು ಪಡೆದಿರುವ 2 ಭಾಷಾ ವಿಷಯಗಳ ಅಂಕಗಳಿಗೆ ಸರಾಸರಿ ತೆಗೆದುಕೊಂಡು, ಅದರಲ್ಲಿ ಶೇ 45 ರಷ್ಟು ಅಂಕಗಳನ್ನು ಪರಿಗಣಿಸುವುದು. ಐಸಿಎಸ್‌ಇ ಮತ್ತು ಇತರೆ ಬೋರ್ಡ್‌ಗಳ ಅಂಕಪಟ್ಟಿಗಳಲ್ಲಿ ಹೆಚ್ಚು ಭಾಷಾ ವಿಷಯಗಳಿದ್ದಲ್ಲಿ ಎಷ್ಟು ಭಾಷಾ ವಿಷಯಗಳಿರುತ್ತದೆಯೋ ಅಷ್ಟೂ ಭಾಷಾ ವಿಷಯಗಳ ಪೈಕಿ ಹೆಚ್ಚು ಅಂಕಗಳನ್ನು ಪಡೆದಿರುವ 2 ಭಾಷಾ ವಿಷಯಗಳ ಅಂಕಗಳ ಸರಾಸರಿಯನ್ನು ಪಡೆದು ಅದರಲ್ಲಿ ಶೇಕಡ 45 ರಷ್ಟು ಅಂಕಗಳಿಗೆ ಪರಿವರ್ತಿಸುವುದು. ಸಿಬಿಎಸ್‌ಇ ಅಂಕಪಟ್ಟಿಗಳಲ್ಲಿ ಎರಡೇ ಭಾಷಾ ವಿಷಯಗಳಿದ್ದಲ್ಲಿ, ಎರಡೂ ಭಾಷಾ ವಿಷಯಗಳ ಅಂಕಗಳ ಸರಾಸರಿಯನ್ನು ಪಡೆದು ಅದರಲ್ಲಿ ಶೇಕಡ 45 ರಷ್ಟು ಅಂಕಗಳಿಗೆ ಪರಿವರ್ತಿಸುವುದು. ಎನ್.ಐ.ಓ.ಎಸ್ ನ 10ನೇ ತರಗತಿಯ ಪರೀಕ್ಷೆಗಳಲ್ಲಿ ಒಂದೇ ಭಾಷೆ ಇದ್ದು, ಆ ವಿದ್ಯಾರ್ಥಿಗಳ ಒಂದು ಭಾಷೆಯಲ್ಲಿ ಪಡೆದ ಅಂಕಗಳ ಶೇಕಡ 45 ರಷ್ಟು ಅಂಕಗಳಿಗೆ ಪರಿವರ್ತಿಸುವುದು. ಶೇ 45 ಅಂಕವು ದಶಮಾಂಶದಲ್ಲಿ ಬಂದಾಗ ಅದನ್ನು ಪೂರ್ಣಾಂಕಕ್ಕೆ ಪರಿವರ್ತಿಸುವುದು.

**ಹಂತ-3:** ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ/10ನೇ ತರಗತಿ ಅಂಕಪಟ್ಟಿಯಲ್ಲಿನ ಮೂರೂ ಐಚ್ಛಿಕ ವಿಷಯಗಳಾದ ವಿಜ್ಞಾನ, ಗಣಿತ ಹಾಗೂ ಸಮಾಜ ವಿಜ್ಞಾನ ವಿಷಯಗಳ ಎಲ್ಲಾ ಅಂಕಗಳನ್ನು ಕೂಡಿಸುವುದು. ಐಚ್ಛಿಕ ವಿಷಯಗಳಲ್ಲಿ ಪಡೆದ ಅಂಕಗಳನ್ನು 03 ರಿಂದ ಭಾಗಿಸಿ ಬಂದಂತಹ ಸರಾಸರಿ ಅಂಕಗಳಲ್ಲಿ ಶೇಕಡ 45 ರಷ್ಟು ಅಂಕಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು. ಸಿಬಿಎಸ್ಇ, ಐಸಿಎಸ್ಇ ಮತ್ತು ಇತರೆ ಬೋರ್ಡ್‌ಗಳ ಅಂಕಪಟ್ಟಿಗಳಲ್ಲಿ ಹೆಚ್ಚು ಐಚ್ಛಿಕ ವಿಷಯಗಳಿದ್ದಲ್ಲಿ ಎಷ್ಟು ಐಚ್ಛಿಕ ವಿಷಯಗಳಿರುತ್ತದೆಯೋ ಅಷ್ಟೂ ಐಚ್ಛಿಕ ವಿಷಯಗಳ ಅಂಕಗಳಿಗೆ ಸರಾಸರಿಯನ್ನು ಪಡೆದು, ಶೇಕಡ 45 ಕ್ಕೆ ಪರಿವರ್ತಿಸುವುದು. ಶೇ 45 ಅಂಕವು ದಶಮಾಂಶದಲ್ಲಿ ಬಂದಾಗ ಅದನ್ನು ಪೂರ್ಣಾಂಕಕ್ಕೆ ಪರಿವರ್ತಿಸುವುದು.

**ಹಂತ-4:** ಹಂತ-1 ರಂತೆ ಎಸ್.ಎಸ್.ಎಲ್.ಸಿ/10ನೇ ತರಗತಿಯಲ್ಲಿ ಪಡೆದ ಭಾಷಾ ವಿಷಯಗಳ ಸರಾಸರಿಯಲ್ಲಿನ ಶೇಕಡ 45 ರಷ್ಟರ ಪರಿವರ್ತಿತ ಅಂಕಗಳನ್ನು, ಪ್ರಥಮ ಪಿಯುಸಿಯಲ್ಲಿ ಆ ವಿದ್ಯಾರ್ಥಿಯು ತೆಗೆದುಕೊಂಡ ಭಾಷಾ ವಿಷಯಗಳ ಶೇಕಡ 45 ರಷ್ಟರ ಅಂಕಗಳಿಗೆ ಪ್ರತ್ಯೇಕವಾಗಿ ಸೇರಿಸುವುದು. ಅಂಕಗಳು ದಶಮಾಂಶದಲ್ಲಿ ಬಂದಾಗ ಅದನ್ನು ಪೂರ್ಣಾಂಕಕ್ಕೆ ಪರಿವರ್ತಿಸುವುದು.

**ಹಂತ-5:** ಅದೇ ರೀತಿ ಹಂತ-3 ರ ಅನ್ವಯ ಎಸ್.ಎಸ್.ಎಲ್.ಸಿ/10ನೇ ತರಗತಿಯಲ್ಲಿ ಪಡೆದ ಮೂರೂ ಐಚ್ಛಿಕ ವಿಷಯಗಳ ಸರಾಸರಿ ಅಂಕಗಳನ್ನು ಶೇಕಡ 45 ಕ್ಕೆ ಪರಿವರ್ತಿಸುವುದು. ಪರಿವರ್ತಿಸಿದ ಅಂಕಗಳಿಗೆ ಪ್ರಥಮ ಪಿಯುಸಿಯಲ್ಲಿ ಆ ವಿದ್ಯಾರ್ಥಿಯು ತೆಗೆದುಕೊಂಡ ನಾಲ್ಕು ಐಚ್ಛಿಕ ವಿಷಯಗಳ ಅಂಕಗಳಲ್ಲಿ ಶೇಕಡ 45ರಷ್ಟು ಅಂಕಗಳನ್ನು ವಿಷಯವಾರು ಪ್ರತ್ಯೇಕವಾಗಿ ಸೇರಿಸುವುದು. ಅಂಕಗಳು ದಶಮಾಂಶದಲ್ಲಿ ಬಂದಾಗ ಅದನ್ನು ಪೂರ್ಣಾಂಕಕ್ಕೆ ಪರಿವರ್ತಿಸುವುದು.

**ಹಂತ-6: ವಿದ್ಯಾರ್ಥಿಯು ದ್ವಿತೀಯ ಪಿ.ಯು.ಸಿ ಯಲ್ಲಿನ ಶೈಕ್ಷಣಿಕ ಚಟುವಟಿಕೆಗಳನ್ನಾಧರಿಸಿ ಶೇಕಡ 10 ಅಂಕಗಳನ್ನು ವಿಷಯಾವಾರು ನೀಡುವುದು.**

ವಿದ್ಯಾರ್ಥಿಗಳಿಗೆ ಅಂಕಗಳನ್ನು ನೀಡುವಾಗ ದ್ವಿತೀಯ ಪಿ.ಯು.ಸಿ ಯಲ್ಲಿ ನಡೆದಂತಹ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳುವಿಕೆ, ಕಾಲೇಜು ಹಂತದ ಕಿರು ಪರೀಕ್ಷೆ/ ಮಧ್ಯವಾರ್ಷಿಕ ಪರೀಕ್ಷೆ/ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಹಾಜರಾಗುವಿಕೆ, ನಿಯೋಜಿತ ಕಾರ್ಯಗಳನ್ನು (Assignments) ಸಲ್ಲಿಸುವಿಕೆ ಮತ್ತು ವಿದ್ಯಾರ್ಥಿಗಳ ಗುಣ, ನಡತೆ ಹಾಗೂ ಶೈಕ್ಷಣಿಕ ಸಾಮರ್ಥ್ಯವನ್ನು ಸಮಗ್ರವಾಗಿ ಪರಿಗಣಿಸಿ ಇಲಾಖಾ ವತಿಯಿಂದ ವಿಷಯಾವಾರು 10 ಅಂಕಗಳನ್ನು ನೀಡುವುದು. ಹಂತ 4ರಲ್ಲಿ ಭಾಷಾ ವಿಷಯಗಳಲ್ಲಿ ಪಡೆದಂತಹ ಅಂಕಗಳಿಗೆ ವಿದ್ಯಾರ್ಥಿಯ ದ್ವಿತೀಯ ಪಿ.ಯು.ಸಿಯಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ನಿಗದಿಪಡಿಸಿರುವ ಶೇಕಡ 10ರಷ್ಟು ಅಂಕಗಳನ್ನು ಭಾಷಾ ವಿಷಯಾವಾರು ಅಂಕಗಳಿಗೆ ಸೇರಿಸಿ, ಪ್ರಥಮ ಪಿ.ಯು.ಸಿ ಯಲ್ಲಿ ಪಡೆದ ಅಂಕಗಳಿಗೆ ಶೇಕಡ 5 ರಷ್ಟು ಕೃಪಾಂಕಗಳನ್ನು ವಿಷಯಾವಾರು ಪರಿಗಣಿಸಿ ಒಟ್ಟು ಅಂಕಗಳನ್ನು ಕ್ರೋಢೀಕರಿಸಿ, ದ್ವಿತೀಯ ಪಿ.ಯು.ಸಿ ಫಲಿತಾಂಶವನ್ನು ನಿರ್ಧರಿಸುವುದು. ವಿಷಯಾವಾರು ಗರಿಷ್ಠ ಅಂಕಗಳನ್ನು 100 ಕ್ಕೆ ಮಿತಿಗೊಳಿಸುವುದು.

**ಹಂತ-7:** ಹಂತ 5ರ ಐಚ್ಛಿಕ ವಿಷಯಗಳಲ್ಲಿ ಪಡೆದಂತಹ ಅಂಕಗಳಿಗೆ ವಿದ್ಯಾರ್ಥಿಯ ದ್ವಿತೀಯ ಪಿ.ಯು.ಸಿ ಯಲ್ಲಿ ಶೈಕ್ಷಣಿಕ ಚಟುವಟಿಕೆಗೆ ನಿಗದಿಪಡಿಸಿರುವ ಶೇಕಡ 10ರಷ್ಟು ಅಂಕಗಳನ್ನು ಐಚ್ಛಿಕ ವಿಷಯಾವಾರು ಪರಿವರ್ತಿತ ಅಂಕಗಳಿಗೆ ಸೇರಿಸಿ, ಪ್ರಥಮ ಪಿ.ಯು.ಸಿ ಯಲ್ಲಿ ಪಡೆದ ಅಂಕಗಳಿಗೆ ಶೇಕಡ 5 ರಷ್ಟು ಕೃಪಾಂಕಗಳನ್ನು ವಿಷಯಾವಾರು ಪರಿಗಣಿಸಿ ಒಟ್ಟು ಅಂಕಗಳನ್ನು ಕ್ರೋಢೀಕರಿಸಿ, ದ್ವಿತೀಯ ಪಿ.ಯು.ಸಿ ಫಲಿತಾಂಶವನ್ನು ನಿರ್ಧರಿಸುವುದು. ವಿಷಯಾವಾರು ಗರಿಷ್ಠ ಅಂಕಗಳನ್ನು 100 ಕ್ಕೆ ಮಿತಿಗೊಳಿಸುವುದು.

## ಉದಾಹರಣೆಯೊಂದಿಗೆ ವಿಧಾನ–1ರ ಹಂತಗಳ ವಿಶ್ಲೇಷಣೆ:

**XYZ** ಎಂಬ ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ ಮತ್ತು ಪ್ರಥಮ ಪಿಯುಸಿ ಯಲ್ಲಿ ಪಡೆದ ಅಂಕಗಳ ವಿವರ ಈ ಕೆಳಕಂಡಂತಿದೆ:–

| ವಿದ್ಯಾರ್ಥಿಯ ಹೆಸರು : **XYZ** | |
|---|---|
| **ಎಸ್.ಎಸ್.ಎಲ್.ಸಿ ಅಂಕಗಳು** | |
| **ವಿಷಯ** | **ಪಡೆದ ಅಂಕಗಳು** |
| ಪ್ರಥಮ ಭಾಷೆ | 90 |
| ದ್ವಿತೀಯ ಭಾಷೆ | 90 |
| ತೃತೀಯ | 80 |
| ವಿಜ್ಞಾನ | 90 |
| ಸಮಾಜವಿಜ್ಞಾನ | 85 |
| ಗಣಿತ | 95 |
| **ಒಟ್ಟು ಅಂಕಗಳು** | 530 |
| **ಶೇಕಡವಾರು** | 84.80 |

| ವಿದ್ಯಾರ್ಥಿಯ ಹೆಸರು : **XYZ** | |
|---|---|
| **ಪ್ರಥಮ ಪಿಯುಸಿ ಅಂಕಗಳು** | |
| **ವಿಷಯ** | **ಪಡೆದ ಅಂಕಗಳು** |
| ಕನ್ನಡ | 80 |
| ಇಂಗ್ಲೀಷ್ | 75 |
| ಭೌತಶಾಸ್ತ್ರ | 70 |
| ರಸಾಯನಶಾಸ್ತ್ರ | 72 |
| ಗಣಿತಶಾಸ್ತ್ರ | 65 |
| ಜೀವಶಾಸ್ತ್ರ | 75 |
| ಒಟ್ಟು ಅಂಕಗಳು | 437 |
| **ಶೇಕಡವಾರು** | 72.83 |

**ಹಂತ:–1 ಪ್ರಥಮ ಭಾಷೆಯಲ್ಲಿ ಗರಿಷ್ಠ ಅಂಕಗಳು 100ಕ್ಕಿಂತಲೂ ಹೆಚ್ಚು ಅಂಕಗಳು ನಿಗಧಿಯಾಗಿದ್ದಲ್ಲಿ, ವಿದ್ಯಾರ್ಥಿಯು ಪಡೆದ ಅಂಕಗಳನ್ನು 100 ಅಂಕಗಳಿಗೆ ಪರಿವರ್ತಿಸುವುದು.**

| ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ **10ನೇ** ತರಗತಿ ಮತ್ತು ಇತರೆ ಮಂಡಳಿಗಳ ಪ್ರಥಮ ಭಾಷಾ ವಿಷಯದ ಅಂಕಗಳ ಲೆಕ್ಕಾಚಾರ. | | | |
|---|---|---|---|
| ಭಾಷಾ ವಿಷಯ | ಗರಿಷ್ಠ ಅಂಕಗಳು | ಪಡೆದ ಅಂಕಗಳು | 100ಕ್ಕೆ ಪರಿವರ್ತಿಸಿ ನಿಗದಿಪಡಿಸಿದ ಅಂಕಗಳು |
| ಪ್ರಥಮ ಭಾಷೆ | 125 | 90 | $\frac{90x100}{125} = 72$ |

**ಹಂತ:–2 ಭಾಷಾ ವಿಷಯಗಳಿಗೆ ಅಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸುವುದು.**

| **ಎಸ್.ಎಸ್.ಎಲ್.ಸಿ/10ನೇ ತರಗತಿಯ ಭಾಷಾ ವಿಷಯಗಳಲ್ಲಿ ಪಡೆದ ಅಂಕಗಳ ಲೆಕ್ಕಾಚಾರ.** | | | | | | |
|---|---|---|---|---|---|---|
| ಭಾಷಾ ವಿಷಯ | ಗರಿಷ್ಠ ಅಂಕಗಳು | ಪಡೆದ ಅಂಕಗಳು | 100ಕ್ಕೆ ಪರಿವರ್ತಿಸಿದ ಅಂಕಗಳು | ಹೆಚ್ಚು ಅಂಕ ಪಡೆದಿರುವ 2 ಭಾಷಾ ವಿಷಯಗಳ ಒಟ್ಟು ಅಂಕಗಳು | ಸರಾಸರಿ ಅಂಕಗಳು | ಶೇ 45 ರ ಅಂಕಗಳು |
| ಪ್ರಥಮ ಭಾಷೆ | 125 | 90 | 72 | 170 | 85 | 38 |
| ದ್ವಿತೀಯ ಭಾಷೆ | 100 | 90 | 90 | | | |
| ತೃತೀಯ | 100 | 80 | 80 | | | |
| ಒಟ್ಟು ಅಂಕಗಳು | 325 | 260 | 242 | | | |

**ಹಂತ:–3 ಐಚ್ಛಿಕ ವಿಷಯಗಳಿಗೆ ಅಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸುವುದು.**

| ಎಸ್.ಎಸ್.ಎಲ್.ಸಿ/10ನೇ ತರಗತಿಯ ಐಚ್ಛಿಕ ವಿಷಯಗಳಲ್ಲಿ ಪಡೆದ ಅಂಕಗಳ ಲೆಕ್ಕಾಚಾರ. | | | | | |
|---|---|---|---|---|---|
| ವಿಷಯ | ಗರಿಷ್ಠ ಅಂಕಗಳು | ಪಡೆದ ಅಂಕಗಳು | 3 ಐಚ್ಛಿಕ ವಿಷಯಗಳ ಒಟ್ಟು ಅಂಕಗಳು | ಸರಾಸರಿ ಅಂಕಗಳು | ಶೇ 45 ರ ಅಂಕಗಳು |
| ವಿಜ್ಞಾನ | 100 | 90 | 270 | 90 | 41 |
| ಸಮಾಜವಿಜ್ಞಾನ | 100 | 85 | | | |
| ಗಣಿತ | 100 | 95 | | | |
| ಒಟ್ಟು ಅಂಕಗಳು | 300 | 270 | | | |

**ಹಂತ 4 ರಿಂದ 7: ದ್ವಿತೀಯ ಪಿ.ಯು.ಸಿಗೆ ನಿಗದಿಪಡಿಸಬೇಕಾದ ಅಂಕಗಳು :**

| ದ್ವಿತೀಯ ಪಿ.ಯು.ಸಿ ವಿಷಯಗಳು | 10ನೇ ತರಗತಿಯ ಶೇ 45 ರಷ್ಟರ ಅಂಕಗಳು (A) | ಪ್ರಥಮ ಪಿ.ಯು.ಸಿ ಯ ಶೇ 45 ರಷ್ಟರ ಅಂಕಗಳು (B) | 10ನೇ ತರಗತಿ+ ಪ್ರಥಮ ಪಿ.ಯು.ಸಿ ಅಂಕಗಳು (A+B) | ದ್ವಿತೀಯ ಪಿ.ಯು.ಸಿ ಶೈಕ್ಷಣಿಕ ಚಟುವಟಿಕೆಗೆ ನೀಡಿರುವ ಶೇ 10 ಅಂಕಗಳು (C) | ಪ್ರಥಮ ಪಿ.ಯು.ಸಿ ಯಲ್ಲಿ ಪಡೆದ ಅಂಕಗಳ ಮೇಲೆ ಶೇಕಡ 5 ಕೃಪಾಂಕಗಳು (D) | ಒಟ್ಟು ಅಂಕಗಳು (A+B+C+D) |
|---|---|---|---|---|---|---|
| ಕನ್ನಡ | 38 | 36 | 74 | 10 | 4 | **88** |
| ಇಂಗ್ಲೀಷ್ | 38 | 34 | 72 | 10 | 4 | **86** |
| ಭೌತಶಾಸ್ತ್ರ | 41 | 32 | 73 | 10 | 4 | **87** |
| ರಸಾಯನಶಾಸ್ತ್ರ | 41 | 32 | 73 | 10 | 4 | **87** |
| ಗಣಿತಶಾಸ್ತ್ರ | 41 | 29 | 70 | 10 | 3 | **83** |
| ಜೀವಶಾಸ್ತ್ರ | 41 | 34 | 75 | 10 | 4 | **89** |
| ಒಟ್ಟು ಅಂಕಗಳು | 240 | 197 | 437 | 60 | 23 | **520** |
| ಶೇಕಡವಾರು | | | | | | **86.67** |

**ಪ್ರಥಮ ಪಿ.ಯು.ಸಿಯಲ್ಲಿ ಉತ್ತೀರ್ಣಗೊಂಡು ದ್ವಿತೀಯ ಪಿ.ಯು.ಸಿ ಗೆ ದಾಖಲಾದ ಸಂದರ್ಭದಲ್ಲಿ ವಿಷಯವನ್ನು ಬದಲಾಯಿಸಿಕೊಂಡಿರುವ ವಿದ್ಯಾರ್ಥಿಗಳ ಫಲಿತಾಂಶ ಕುರಿತು.**

ಹಿಂದಿನ ವರ್ಷಗಳಲ್ಲಿ ಪ್ರಥಮ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು, ತದ ನಂತರ ದ್ವಿತೀಯ ಪಿ.ಯು.ಸಿ ತರಗತಿಗೆ ಬೇರೆ ಕಾಲೇಜಿಗೆ ದಾಖಲಾತಿ ಪಡೆದಂತಹ ವಿದ್ಯಾರ್ಥಿಗಳು ಈ ಕೆಳಕಂಡಂತೆ ಎರಡು ಕಾರಣಗಳಿಂದ ವಿಷಯವನ್ನು ಬದಲಾಯಿಸಿಕೊಂಡಿರುತ್ತಾರೆ.

ಎ. ಕೋವಿಡ್–19ರ ಹಿನ್ನೆಲೆಯಲ್ಲಿ ವಲಸೆ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿಗೆ ಕಾಲೇಜು ಬದಲಾವಣೆ ಬಯಸಿ ದಾಖಲಾಗುವ ಕಾಲೇಜಿನಲ್ಲಿ ವಿದ್ಯಾರ್ಥಿಯು ಪ್ರಥಮ ಪಿ.ಯು.ಸಿಯಲ್ಲಿ ವ್ಯಾಸಂಗ ಮಾಡಿರುವ ವಿಷಯಗಳ ಸಂಯೋಜನೆ ಇಲ್ಲದಿರುವುದು.

ಬಿ. ಪ್ರಥಮ ಪಿ.ಯು.ಸಿ ವ್ಯಾಸಂಗ ಮಾಡುವಾಗ ವಿದ್ಯಾರ್ಥಿಗೆ ಯಾವುದೋ ಒಂದು ವಿಷಯ ತುಂಬಾ ಕಷ್ಟಕರವಾಗಿ ಸದರಿ ವಿಷಯವನ್ನು ದ್ವಿತೀಯ ಪಿ.ಯು.ಸಿಯಲ್ಲಿ ಬದಲಾಯಿಸಿಕೊಳ್ಳುವುದು.

ಈ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗುವ ಮೊದಲು ಬದಲಾವಣೆ ಮಾಡಿಕೊಂಡ ವಿಷಯಗಳಲ್ಲಿ ಪ್ರಥಮ ಪಿ.ಯು.ಸಿ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾಗಿರಬೇಕು. ಆದರೆ ಕೋವಿಡ್ ಹಿನ್ನೆಲೆಯಲ್ಲಿ ಪ್ರಥಮ ಪಿ.ಯು.ಸಿ ಪರೀಕ್ಷೆಗಳನ್ನು ನಡೆಸದೆ ಇರುವುದರಿಂದ ಅಂತಹ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ ಯಲ್ಲಿ ಬದಲಾಯಿಸಿಕೊಂಡಿರುವ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ ಈ ವಿದ್ಯಾರ್ಥಿಗಳು ಬದಲಾವಣೆ ಮಾಡಿಕೊಂಡಿರುವ ಭಾಷಾ/ಐಚ್ಛಿಕ ವಿಷಯಗಳಲ್ಲಿ ಹಿಂದಿನ ವರ್ಷದ ಪ್ರಥಮ ಪಿ.ಯು.ಸಿಯ ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು 39 ಅಥವಾ 39ಕ್ಕಿಂತ ಕಡಿಮೆ ಇದ್ದಲ್ಲಿ ಕನಿಷ್ಠ ಉತ್ತೀರ್ಣ ಅಂಕಗಳು ಮತ್ತು ಶೇ 5 ರಷ್ಟು ಕೃಪಾಂಕಗಳನ್ನು ನೀಡಿ ಫಲಿತಾಂಶವನ್ನು ನೀಡಬಹುದಾಗಿದೆ.

ಉಳಿದ ವಿದ್ಯಾರ್ಥಿಗಳು ಹಿಂದಿನ ವರ್ಷದ ಪ್ರಥಮ ಪಿ.ಯು.ಸಿಯ ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು 39ಕ್ಕಿಂತಲೂ ಹೆಚ್ಚು ಇದ್ದಲ್ಲಿ ಅದೇ ಅಂಕಗಳನ್ನು ದ್ವಿತೀಯ ಪಿ.ಯು.ಸಿ ಯಲ್ಲಿ ಬದಲಾವಣೆ ಮಾಡಿಕೊಂಡಿರುವ ವಿಷಯಕ್ಕೆ ಯಥಾವತ್ತಾಗಿ ಪರಿಗಣಿಸುವುದು ಹಾಗೂ ಇತರೆ ಹೊಸ ವಿದ್ಯಾರ್ಥಿಗಳಿಗೆ ಅನುಸರಿಸುವ ಕ್ರಮಗಳನ್ನೇ ಇವರಿಗೂ ಅಳವಡಿಸಿ ಫಲಿತಾಂಶ ನೀಡಬಹುದಾಗಿದೆ.

## ಶ್ರೇಣಿಯನ್ನು ಒಳಗೊಂಡಿರುವ ಇತರೆ ಬೋರ್ಡ್ ವಿದ್ಯಾರ್ಥಿಗಳ ಅಂಕಪಟ್ಟಿಗಳಲ್ಲಿನ ಶ್ರೇಣಿಗಳನ್ನು ಅಂಕಗಳನ್ನಾಗಿ ಪರಿವರ್ತಿಸುವ ಕುರಿತು.

ಇತರೆ ಬೋರ್ಡ್‌ಗಳಲ್ಲಿ 10ನೇ ತರಗತಿ/11ನೇ ತರಗತಿಯಲ್ಲಿ ಉತ್ತೀರ್ಣರಾಗಿ ಅಥವಾ 10ನೇ ತರಗತಿ ಮತ್ತು 11ನೇ ತರಗತಿಗಳೆರಡರಲ್ಲೂ ಉತ್ತೀರ್ಣರಾಗಿ 2020–21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೊಂದಾಯಿಸಿಕೊಂಡಿರುವ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ ಅಂಕಗಳನ್ನು ನಮೂದಿಸುವಾಗ ಅಂಕಪಟ್ಟಿಯಲ್ಲಿನ ಶ್ರೇಣಿಗಳನ್ನು ಪ್ರತ್ಯೇಕವಾಗಿ ಸ್ಯಾಟ್ಸ್ ಪೋರ್ಟಲ್(SATS Portal)ನಲ್ಲಿ ನೀಡಿರುವ ಬಾಕ್ಸ್‌ಗಳಲ್ಲಿ ನಿಖರವಾಗಿ ನಮೂದಿಸುವುದು. ಅಂಕಪಟ್ಟಿಯಲ್ಲಿ ಶ್ರೇಣಿಗೆ ಸಂಬಂಧಿಸಿದಂತೆ ನೀಡಿರುವ ಸೂಚನೆಗಳಂತೆ ಶ್ರೇಣಿ, ಶ್ರೇಣಿಯ ಕನಿಷ್ಠ–ಗರಿಷ್ಠ ಅಂಕಗಳನ್ನು ನಿಖರವಾಗಿ ದಾಖಲಿಸುವುದು. ಶ್ರೇಣಿಗಳನ್ನು ಅಂಕಗಳಾಗಿ ಪರಿವರ್ತಿಸುವಾಗ ಶ್ರೇಣಿಯ ಕನಿಷ್ಠ–ಗರಿಷ್ಠ ಅಂಕಗಳ ನಡುವಿನ ಮಧ್ಯದ ಬಿಂದುವಿನ ಅಂಕಗಳನ್ನು ಪರಿಗಣಿಸಿ ದಾಖಲಿಸುವುದು. ಒಂದು ವೇಳೆ ಮಧ್ಯದ ಬಿಂದು 95.5 ಎಂದಾದಲ್ಲಿ ಮುಂದಿನ ಸಂಖ್ಯೆ 96 ಅಂಕಗಳಿಗೆ ಪರಿಗಣಿಸುವುದು. ಅಂಕವು ದಶಮಾಂಶದಲ್ಲಿ ಬಂದಾಗ ಅದನ್ನು ಪೂರ್ಣಾಂಕಕ್ಕೆ ಪರಿವರ್ತಿಸುವುದು.

ಉದಾಹರಣೆ:

| ವಿಷಯ | ಶ್ರೇಣಿ | ಶ್ರೇಣಿಯ ಕನಿಷ್ಠ–ಗರಿಷ್ಠ ಅಂಕಗಳು | ಶ್ರೇಣಿಗಳನ್ನು ಅಂಕಗಳಾಗಿ ಪರಿವರ್ತಿಸುವ ಲೆಕ್ಕಾಚಾರ | Mid Point As Score |
|---|---|---|---|---|
| ವಿಜ್ಞಾನ | A+ | 91–100 | $\frac{91+100}{2} = 95.5$ | 96 |

ಕೆಲವು ಸಂದರ್ಭಗಳಲ್ಲಿ ಅಂಕಗಳು, ಶ್ರೇಣಿ ಬದಲಾಗಿ ಕ್ರೆಡಿಟ್ ಪಾಯಿಂಟ್‌ಗಳನ್ನು (CGPA) ಮಾತ್ರ ನೀಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಅಂಕಪಟ್ಟಿಗಳಲ್ಲಿ ನೀಡಿರುವ CGPA ಪಾಯಿಂಟ್ಸ್‌ಗಳನ್ನು ಅಂಕಗಳಾಗಿ ಪರಿವರ್ತಿಸಿ ನಿಖರವಾಗಿ ದಾಖಲಿಸುವುದು. CGPA ಯನ್ನು ಅಂಕಗಳಿಗೆ ಪರಿವರ್ತಿಸಲು 9.5 ರಿಂದ ಗುಣಿಸುವುದು.

ಉದಾಹರಣೆ:–ವಿದ್ಯಾರ್ಥಿಯು ವಿಜ್ಞಾನ ವಿಷಯದ CGPA ಯ ಅಂಕಗಳು 9 ಆಗಿದ್ದಲ್ಲಿ ಈ ಕೆಳಕಂಡಂತೆ ಲೆಕ್ಕಾಚಾರ ಮಾಡಿ ಅಂಕಗಳನ್ನು ನಿಗದಿಪಡಿಸುವುದು.

| ವಿಷಯ | CGPA ಯನ್ನು ಅಂಕಗಳಾಗಿ ಪರಿವರ್ತಿಸುವ ಲೆಕ್ಕಾಚಾರ | Marks Score |
|---|---|---|
| ವಿಜ್ಞಾನ | 9 X 9.5 = 85.5 | 86 |

## ವಿದೇಶಿ ವಿದ್ಯಾರ್ಥಿಗಳ ಫಲಿತಾಂಶದ ಕುರಿತು.

ವಿದೇಶಿ ಬೋರ್ಡ್‌ಗಳ 10ನೇ ತರಗತಿ ಅಥವಾ 11ನೇ ತರಗತಿ ಅಂಕಪಟ್ಟಿಗಳಲ್ಲಿ ಕೇವಲ ಶ್ರೇಣಿಗಳನ್ನು ನೀಡಿದ್ದು, ಅಂಕಗಳು ನಮೂದಾಗಿರುವುದಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಅಂಕಗಳನ್ನು ನಮೂದಿಸುವಾಗ ಅಂಕಪಟ್ಟಿಯಲ್ಲಿನ ಶ್ರೇಣಿಗಳನ್ನು ಪ್ರತ್ಯೇಕವಾಗಿ ಸ್ಯಾಟ್ಸ್ ಪೋರ್ಟಲ್(SATS Portal)ನಲ್ಲಿ ನೀಡಿರುವ ಬಾಕ್ಸ್‌ಗಳಲ್ಲಿ ನಿಖರವಾಗಿ ನಮೂದಿಸುವುದು. ಅಂಕಪಟ್ಟಿಯಲ್ಲಿ ಶ್ರೇಣಿಗೆ ಸಂಬಂಧಿಸಿದಂತೆ ನೀಡಿರುವ ಸೂಚನೆಗಳಂತೆ ಶ್ರೇಣಿ, ಶ್ರೇಣಿಯ ಕನಿಷ್ಠ–ಗರಿಷ್ಠ ಅಂಕಗಳನ್ನು ನಿಖರವಾಗಿ ದಾಖಲಿಸುವುದು. ಶ್ರೇಣಿಗಳನ್ನು ಅಂಕಗಳಾಗಿ ಪರಿವರ್ತಿಸುವಾಗ ಶ್ರೇಣಿಯ ಕನಿಷ್ಠ–ಗರಿಷ್ಠ ಅಂಕಗಳ ನಡುವಿನ ಮಧ್ಯದ ಬಿಂದುವಿನ ಅಂಕಗಳನ್ನು ಪರಿಗಣಿಸಿ ದಾಖಲಿಸುವುದು. ಒಂದು ವೇಳೆ ಮಧ್ಯದ ಬಿಂದು 95.5 ಎಂದಾದಲ್ಲಿ ಮುಂದಿನ ಸಂಖ್ಯೆ 96 ಅಂಕಗಳಿಗೆ ಪರಿಗಣಿಸುವುದು. ಅಂಕವು ದಶಮಾಂಶದಲ್ಲಿ ಬಂದಾಗ ಅದನ್ನು ಪೂರ್ಣಾಂಕಕ್ಕೆ ಪರಿವರ್ತಿಸುವುದು.

ಉದಾಹರಣೆ:

| ವಿಷಯ | ಶ್ರೇಣಿ | ಶ್ರೇಣಿಯ ಕನಿಷ್ಠ–ಗರಿಷ್ಠ ಅಂಕಗಳು | ಶ್ರೇಣಿಗಳನ್ನುಅಂಕಗಳಾಗಿ ಪರಿವರ್ತಿಸುವ ಲೆಕ್ಕಾಚಾರ | Mid Point As Score |
|---|---|---|---|---|
| ವಿಜ್ಞಾನ | A+ | 91–100 | $\frac{91+100}{2} = 95.5$ | 96 |

ಕೆಲವು ಸಂದರ್ಭಗಳಲ್ಲಿ ಅಂಕಗಳು, ಶ್ರೇಣಿ ಬದಲಾಗಿ ಕ್ರೆಡಿಟ್ ಪಾಯಿಂಟ್‌ಗಳನ್ನು (CGPA) ಮಾತ್ರ ನೀಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಅಂಕಪಟ್ಟಿಗಳಲ್ಲಿ ನೀಡಿರುವ CGPA ಪಾಯಿಂಟ್ಸ್‌ಗಳನ್ನು ಅಂಕಗಳಾಗಿ ಪರಿವರ್ತಿಸಿ ನಿಖರವಾಗಿ ದಾಖಲಿಸುವುದು. CGPA ಯನ್ನು ಅಂಕಗಳಿಗೆ ಪರಿವರ್ತಿಸಲು 9.5 ರಿಂದ ಗುಣಿಸುವುದು.

ಉದಾಹರಣೆ:ವಿದ್ಯಾರ್ಥಿಯು ವಿಜ್ಞಾನ ವಿಷಯದ CGPA ಯ ಅಂಕಗಳು 9 ಆಗಿದ್ದಲ್ಲಿ ಈ ಕೆಳಕಂಡಂತೆ ಲೆಕ್ಕಾಚಾರ ಮಾಡಿ ಅಂಕಗಳನ್ನು ನಿಗದಿಪಡಿಸುವುದು.

| ವಿಷಯ | CGPA ಯನ್ನು ಅಂಕಗಳಾಗಿ ಪರಿವರ್ತಿಸುವ ಲೆಕ್ಕಾಚಾರ | Marks Score |
|---|---|---|
| ವಿಜ್ಞಾನ | 9 X 9.5 = 85.5 | 86 |

## 2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶ ಕುರಿತು.

2019-20ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಹಾಜರಾಗಿ, ಫಲಿತಾಂಶವನ್ನು ಪಡೆದು ಸದರಿ ಫಲಿತಾಂಶವು ತೃಪ್ತಿಕರವಾಗದೇ ಫಲಿತಾಂಶವನ್ನು ತಿರಸ್ಕರಿಸಿ, 2021ರ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು 2019-20ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಯ ಫಲಿತಾಂಶದಲ್ಲಿ ಪಡೆದ ಅಂಕಗಳನ್ನೇ ಮರುಪಡೆಯಲು ಅವಕಾಶ ಕಲ್ಪಿಸುವುದು. ಅಂತಹ ವಿದ್ಯಾರ್ಥಿಗಳು ತಮ್ಮ ಕಾಲೇಜುಗಳ ಪ್ರಾಂಶುಪಾಲರುಗಳ ಮೂಲಕ ನಿಯಮಾನುಸಾರ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸುವುದು.

ಹಿಂದಿನ ವರ್ಷಗಳಲ್ಲಿ ಹೊಸ ಅಥವಾ ಖಾಸಗಿ ಅಭ್ಯರ್ಥಿಯಾಗಿ ನೊಂದಾಯಿಸಿ, ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಒಂದು ಅಥವಾ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣಗೊಂಡು 2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ, ಈ ವಿದ್ಯಾರ್ಥಿಗಳು ಹಿಂದಿನ ವರ್ಷಗಳಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆ ಬರೆದಿದ್ದು, ಅವರ ಕೌಶಲ್ಯಗಳು ಪರೀಕ್ಷೆಯಲ್ಲಿ ಉತ್ತೀರ್ಣಗೊಳ್ಳಲು ಬೇಕಾಗುವ ಕನಿಷ್ಠ ಅಂಕಗಳನ್ನು ಪಡೆಯುವ ಮಟ್ಟದಲ್ಲಿ ಇರುವುದಿಲ್ಲ. ಆದ್ದರಿಂದ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಹೊಸ ವಿದ್ಯಾರ್ಥಿಗಳಿಗೆ ಅನುಸರಿಸಿರುವ ವಿಧಾನಗಳನ್ನು ಅಳವಡಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ ಪ್ರಾಯೋಗಿಕೇತರ ವಿಷಯದ ವಿದ್ಯಾರ್ಥಿಗಳಿಗೆ ಅವರು ಅನುತ್ತೀರ್ಣಗೊಂಡಿರುವ ವಿಷಯಗಳಲ್ಲಿ ಕನಿಷ್ಠ ಉತ್ತೀರ್ಣ ಅಂಕಗಳನ್ನು ನೀಡಿ ಈ ವಿಷಯಕ್ಕೆ ನಿಗದಿಪಡಿಸಿರುವ ಗರಿಷ್ಠ ಅಂಕಗಳಿಗನುಗುಣವಾಗಿ ಶೇಕಡ 5ರಷ್ಟು ಕೃಪಾಂಕಗಳನ್ನು ನೀಡಿ ಫಲಿತಾಂಶ ಘೋಷಿಸಬಹುದಾಗಿದೆ.

ಪ್ರಾಯೋಗಿಕ ಪರೀಕ್ಷೆ ಹೊಂದಿರುವ ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಈ ಹಿಂದಿನ ವಿಷಯಗಳಲ್ಲಿ ಪಡೆದ ಪ್ರಾಯೋಗಿಕ ಪರೀಕ್ಷಾ ಅಂಕಗಳನ್ನು ಯಥಾವತ್ತಾಗಿ ಉಳಿಸಿಕೊಂಡು, ಥಿಯರಿ ವಿಷಯದ ಗರಿಷ್ಠ ಅಂಕಗಳಿಗೆ ಅನುಗುಣವಾಗಿ ಕನಿಷ್ಠ ಉತ್ತೀರ್ಣ ಅಂಕಗಳೊಂದಿಗೆ ಶೇಕಡ 5 ರಷ್ಟು ಕೃಪಾಂಗಳನ್ನು ನೀಡಿ ಫಲಿತಾಂಶ ಘೋಷಿಸಬಹುದಾಗಿದೆ. ಒಂದು ವೇಳೆ ವಿದ್ಯಾರ್ಥಿಯು ಪ್ರಾಯೋಗಿಕ ಪರೀಕ್ಷೆಯಲ್ಲಿ ಈ ಹಿಂದೆ ಗಳಿಸಿದ ಅಂಕಗಳ ಜೊತೆಗೆ ಥಿಯರಿ ವಿಷಯಕ್ಕೆ ನೀಡಿದ ಅಂಕಗಳು ಕನಿಷ್ಠ ಉತ್ತೀರ್ಣ ಅಂಕಗಳಿಗಿಂತ ಕಡಿಮೆ ಬಂದಲ್ಲಿ ಗರಿಷ್ಠ ಅಂಕಗಳಿಗೆ ಅನುಗುಣವಾಗಿ ಕನಿಷ್ಠ ಉತ್ತೀರ್ಣ ಅಂಕಗಳೊಂದಿಗೆ ಶೇಕಡ 5 ರಷ್ಟು ಕೃಪಾಂಗಳನ್ನು ನೀಡಿ ಫಲಿತಾಂಶ ಘೋಷಿಸಬಹುದಾಗಿದೆ.

## ಖಾಸಗಿ ಅಭ್ಯರ್ಥಿಗಳ ಫಲಿತಾಂಶದ ಕುರಿತು.

2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿರುವ ಖಾಸಗಿ ವಿದ್ಯಾರ್ಥಿಗಳ ಫಲಿತಾಂಶಕ್ಕೆ ಸಂಬಂಧಿಸಿದಂತೆ, ಸದರಿ ವಿದ್ಯಾರ್ಥಿಗಳಿಗೆ ಅಂಕಗಳನ್ನು ನಿಗಧಿಪಡಿಸಲು ಯಾವುದೇ ರೀತಿಯ ದಾಖಲೆಗಳು(ಪ್ರಥಮ ಪಿ.ಯು.ಸಿ ಅಂಕಗಳು ಇತ್ಯಾದಿ) ಇಲ್ಲದ ಕಾರಣ ಸದರಿ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಪರೀಕ್ಷೆ ನಡೆಸಿ ಫಲಿತಾಂಶವನ್ನು ನೀಡಬಹುದಾಗಿದೆ. ಒಂದು ವೇಳೆ ಈ ವರ್ಷ ಖಾಸಗಿಯಾಗಿ ನೊಂದಾಯಿಸಿದ ಅಭ್ಯರ್ಥಿಗಳು ಕಾರಣಾಂತರಗಳಿಂದ ಪರೀಕ್ಷೆ ಬರೆಯಲು ಸಾಧ್ಯವಾಗದಿದ್ದಲ್ಲಿ ಅವರು ಮುಂದಿನ ವರ್ಷ ನಡೆಯುವ ಪರೀಕ್ಷೆಯಲ್ಲಿ ಶುಲ್ಕರಹಿತವಾಗಿ ಪರೀಕ್ಷೆ ಬರೆಯಲು ಅವಕಾಶ ನೀಡುವುದು.

## ದ್ವಿತೀಯ ಪಿ.ಯು.ಸಿ ಅಂಕಪಟ್ಟಿಯಲ್ಲಿ ಶ್ರೇಣಿ(GRADE) ಗಳನ್ನು ನಮೂದಿಸುವ ಕುರಿತು.

ಈ ಹಿಂದಿನ ವರ್ಷಗಳಲ್ಲಿ ದ್ವಿತೀಯ ಪಿ.ಯು.ಸಿ ಅಂಕಪಟ್ಟಿಗಳಲ್ಲಿ ಶ್ರೇಣಿಗಳನ್ನು ನೀಡುವ ಪದ್ಧತಿ ಇರುವುದಿಲ್ಲ. ಆದರೆ, ದಿನಾಂಕ: 04.06.2021 ರ ಪತ್ರಿಕಾ ಗೋಷ್ಠಿಯಲ್ಲಿ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರಥಮ ಪಿ.ಯು.ಸಿ ಅಂಕಗಳ ಆಧಾರದ ಮೇಲೆ 'ಗ್ರೇಡ್' ನೀಡುವ ಮೂಲಕ ಫಲಿತಾಂಶ ನೀಡಲಾಗುವುದೆಂದು ತಿಳಿಸಲಾಗಿತ್ತು. ಮಾನದಂಡಗಳನ್ನು ರೂಪಿಸುವಾಗ ಪ್ರಥಮ ಪಿ.ಯು.ಸಿ ಅಂಕಗಳ ಜೊತೆಗೆ 10 ನೇ ತರಗತಿಯ ಅಂಕಗಳನ್ನೂ ಸಹ ಗಣನೆಗೆ ತೆಗೆದುಕೊಂಡಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ಪ್ರತೀ ವಿಷಯಗಳಲ್ಲಿ ಅಂಕಗಳನ್ನು ನಮೂದಿಸುವುದರಿಂದ 'ಗ್ರೇಡ್' ನೀಡುವ ಅನಿವಾರ್ಯತೆ ಕಂಡುಬರುವುದಿಲ್ಲ. ಆದ್ದರಿಂದ ಈ ವರ್ಷದ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳ ಅಂಕಪಟ್ಟಿಗಳು ಹಿಂದಿನ ವರ್ಷಗಳ ಅಂಕಪಟ್ಟಿಗಳಿಗಿಂತ ಭಿನ್ನ ಸ್ವರೂಪದ್ದಾಗಿರಬಾರದು

ಹಾಗೂ ಈ ಕಾರಣದಿಂದ ವಿದ್ಯಾರ್ಥಿಗಳ ಮುಂದಿನ ಜೀವನದಲ್ಲಿ ಅವರನ್ನು **"ಕೋವಿಡ್ ಬ್ಯಾಚ್"** ವಿದ್ಯಾರ್ಥಿಗಳು ಎಂದು ಹೆಸರಿಸಬಾರದೆಂಬ ಉದ್ದೇಶದಿಂದ **'ಗ್ರೇಡ್' ನೀಡುವ ನಿರ್ಧಾರವನ್ನು ರದ್ದುಪಡಿಸುವುದು.**

**ಈ ಫಲಿತಾಂಶದಿಂದ ತೃಪ್ತರಾಗದಿರುವ ವಿದ್ಯಾರ್ಥಿಗಳು ಅನುಸರಿಸಬಹುದಾದ ಕ್ರಮ.**

ಒಂದು ವೇಳೆ ಮೇಲೆ ತಿಳಿಸಿದ ವಿಧಾನಗಳಿಂದ ಪಡೆಯುವ ಅಂಕಗಳಿಗೆ ವಿದ್ಯಾರ್ಥಿಗಳು ತೃಪ್ತರಾಗದಿದ್ದಲ್ಲಿ, ಅವರು **ಮುಂದಿನ ದಿನಗಳಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸುವ ದ್ವಿತೀಯ ಪಿ.ಯು.ಸಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದೆ.** ಪರೀಕ್ಷೆಗೆ ನೊಂದಾಯಿಸಿಕೊಂಡಲ್ಲಿ ಪರೀಕ್ಷೆಯಲ್ಲಿ ಪಡೆಯುವ ಅಂಕಗಳೇ ಅಂತಿಮವಾಗಿದ್ದು, ಹಿಂದಿನ ಅಂಕಗಳನ್ನು ಮರುನೀಡಲು ಸಾಧ್ಯವಿರುವುದಿಲ್ಲ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಪ್ರಸ್ತಾವನೆಯನ್ನು ಪರಿಶೀಲಿಸಿ, 2020–21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ಹೊಸ ವಿದ್ಯಾರ್ಥಿಗಳು, ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶದ ಕುರಿತು ಹಾಗೂ ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸುವ ಕುರಿತು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 19 ಟಿಪಿಯು 2021,**
**ಬೆಂಗಳೂರು, ದಿನಾಂಕ:05.07.2021**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕೋವಿಡ್–19ರ ಸಾಂಕ್ರಾಮಿಕ ರೋಗದ ಕಾರಣ 2020–21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗಳನ್ನು ರದ್ದುಗೊಳಿಸಿದ್ದು, ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಪ್ರಥಮ ಪಿ.ಯು.ಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳು ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಡೆದ ಅಂಕಗಳು, ದ್ವಿತೀಯ ಪಿ.ಯು.ಸಿ ಶೈಕ್ಷಣಿಕ ಚಟುವಟಿಕೆಗಳಿಗೆ ನಿಗದಿಪಡಿಸಿದ ಅಂಕಗಳು ಹಾಗೂ ಕೃಪಾಂಕಗಳ ಆಧಾರದ ಮೇಲೆ ಅಂಕಗಳನ್ನು ನಿಗದಿಪಡಿಸಿ ಫಲಿತಾಂಶವನ್ನು ಘೋಷಿಸುವುದು. ಫಲಿತಾಂಶವನ್ನು ಘೋಷಿಸಲು ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಅನುಸರಿಸುವುದು.

ಪುನರಾವರ್ತಿತ ವಿದ್ಯಾರ್ಥಿಗಳಿಗೆ ಕನಿಷ್ಠ ಉತ್ತೀರ್ಣ ಅಂಕಗಳನ್ನು ಮತ್ತು ಶೇ 5 ರಷ್ಟು ಕೃಪಾಂಕಗಳನ್ನು ನೀಡಿ ಫಲಿತಾಂಶವನ್ನು ಘೋಷಿಸುವುದು. ಹಾಗೆಯೇ ಫಲಿತಾಂಶವನ್ನು ಘೋಷಿಸಲು ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಅನುಸರಿಸುವುದು.

ಒಂದು ವೇಳೆ ಘೋಷಿತ ಫಲಿತಾಂಶದಿಂದ ಪಡೆದ ಅಂಕಗಳು ವಿದ್ಯಾರ್ಥಿಗಳಿಗೆ ತೃಪ್ತಿಕರವಾಗದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯು ನಡೆಸುವ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲು ಆದೇಶಿಸಿದೆ. ಅದೇ ರೀತಿ ಖಾಸಗಿ ಅಭ್ಯರ್ಥಿಗಳಿಗೆ ಮುಂದಿನ ದಿನಗಳಲ್ಲಿ ಪರೀಕ್ಷೆಗಳನ್ನು ನಡೆಸಿ ಫಲಿತಾಂಶ ನೀಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Padmini S. N. 5/7/21
(ಪದ್ಮಿನಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ)

**ಇವರಿಗೆ:–**

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡರಸ್ತೆ, ಬೆಂಗಳೂರು.

3. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ, ಬೆಂಗಳೂರು.
9. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ, ಬೆಂಗಳೂರು.